ಮೇಲಿನದು ಕೆಳಗಾಗಿ ಬಿಟ್ಟರೆ... ಪ್ರಾಣಕ್ಕೇ ಸಂಚಕಾರ. ಬೇಡ ಬಿಡಿ. ಬರೀ ಕೈ, ಕಾಲುಗಳನ್ನು ಸ್ಕ್ರೂಗಳೊಂದಿಗೆ ಬಿಚ್ಚಿಡುವಂತಿದ್ದರೆ... ಒಂದು ಬಾರಿ ಊಹಿಸಿ.

ಹೌದು, ಕೈ, ಕಾಲುಗಳನ್ನು ನಟ್ಟು, ಬೋಲ್ಟು, ಸ್ಕ್ರೂ ಮತ್ತಿತರ ಸಲಕರಣೆಗಳ ಸಹಾಯದಿಂದ ಬಿಚ್ಚಿಟ್ಟು ಮತ್ತೆ ಜೋಡಿಸುವಂತಿದ್ದರೆ... ಈ ಭೂಮಿಯ ಮೇಲೆ ಹೊಸ ಅಧ್ಯಾಯವಿರುತ್ತಿತ್ತು. ಅನುಕೂಲಗಳ ಜೊತೆಗೆ ವಿಭಿನ್ನವಾದ ತೊಂದರೆಗಳು ಬರಬಹುದಿತ್ತು. ಮಕ್ಕಳಿಂದ ಆರಂಭವಾದರೆ, "ಅಮ್ಮಾ, ನಿನ್ನೆ ಆಡ್ತಾ ಆಡ್ತಾ ಫ್ರೆಂಡ್ ಮನೇಲಿ ಕೈ ಬಿಚ್ಚಿಟ್ಟು ಮರೆತ್ಬಿಟ್ಟಿದೀನಿ. ತರಲು ಟೈಮಿಲ್ಲ. ಶಾಲೆಗೆ ಲೇಟಾಗ್ತಾ ಇದೆ. ಇವತ್ತೊಂದಿನ ನಿನ್ನ ಕೈ ಕೊಡಮ್ಮಾ" ಎಂದು ತನ್ನ ಅಳತೆಗೆ ಮೀರಿದ, ದಪ್ಪನಾದ ಕೈ ಹಾಕಿಕೊಂಡು ಶಾಲೆಗೆ ಹೋಗುತ್ತಿದ್ದವೋ ಏನೋ. ಶಾಲೆಯಲ್ಲಿ ಡಿಸಿಪ್ಲಿನ್ ಕಮಿಟಿಯವರು 'ಹೀಗೆಲ್ಲಾ ಬರುವಂತಿಲ್ಲ' ಎಂದು ತಗಾದೆ ತೆಗೆಯುತ್ತಿರಬಹುದು. ಮನೆಯಲ್ಲಿ ಇಬ್ಬರೋ, ಮೂವರೋ ಮಕ್ಕಳಿದ್ದರೆ ಗೃಹಿಣಿ, "ಓಯ್ ಮಕ್ಕಳಾ, ಎರಡೂ ಕೈ ಹೊತ್ಕೊಂಡು ಹೋದ್ರೆ ಏನ್ಮಾಡ್ಲಿ? ಒಂದಂತೂ ಬೇಕೇ ಬೇಕು" ಎಂದು ಗದರಬಹುದಿತ್ತು. ಗಂಡ ಹೆಂಡತಿಗೆ, "ಈವತ್ತು ಆಫೀಸಿನಲ್ಲಿ ಅಡಿಗೆ ಸ್ಪರ್ಧೆ ಇದೆ ಕಣೆ. ನಿನ್ನ ಕೈ ಕೊಟ್ಟಿರ್ತೀಯಾ?" ಎಂದು ಕೇಳಿ ತೆಗೆದುಕೊಂಡು ಹೋಗುತ್ತಿದ್ದ. ಉದ್ಯೋಗಸ್ಥ ಮಹಿಳೆಯರು ಕೂಡ, "ಡಿಯರ್, ಇಂದು ಡಾಟಾ ಬೇಸ್ ಮೇಲೆ ಕೆಲಸ ಮಾಡ್ಬೇಕಿದೆ. ನಾಳೆ ಪ್ರೊಜೆಕ್ಟ್ ಡೆಲಿವರಿ ಕೊಡ್ಬೇಕು. ನಿಮ್ಮ ಕೈ ಕೊಟ್ಟಿರ್ತೀರಾ? ನೀವು... ಸಾಧ್ಯವಾದ್ರೆ ರಜ ಹಾಕಿ" ಎಂದು ತಮ್ಮದನ್ನು ಕಳಚಿ ಸ್ಕ್ರೂ ತಿರುವಿ ಗಂಡನದನ್ನು ಹಾಕಿಕೊಂಡು ಹೋಗುತ್ತಿದ್ದರು. ಶಾಲೆ, ಆಫೀಸುಗಳಲ್ಲಿ ತೋಳು, ಕೈಗಳ ನಡುವಿನ ವ್ಯತ್ಯಾಸ ಕಂಡು, "ಏನಪ್ಪಾ, ಈವತ್ತು ಯಾರದ್ದು ತಗುಲಿಸಿಕೊಂಡು ಬಂದಿದ್ದೀಯಾ?" ಎನ್ನುವುದು ಮಾಮೂಲಾಗುತ್ತಿತ್ತು.

ಯಾವುದೇ ವಿಷಯದಲ್ಲೂ ನುರಿತ ಕೈಗಳಿಗೆ ಎಲ್ಲಿಲ್ಲದ ಡಿಮ್ಯಾಂಡಿರುತ್ತಿತ್ತು. ಬಾಡಿಗೆ ಸೈಕಲ್ಲುಗಳ ಶಾಪಿದ್ದಂತೆ 'ಬಾಡಿಗೆ ಕೈ, ಕಾಲುಗಳ ಶಾಪು' ಇದ್ದಿರಬಹುದಿತ್ತು. ಅವುಗಳಲ್ಲೇ ಕಂಪ್ಯೂಟರ್‌ನಲ್ಲಿ ಎಕ್ಸ್‌ಪರ್ಟ್ ಕೈಗಳು, ಅಡಿಗೆ, ಚಿತ್ರಕಲೆ, ಕಸೂತಿ, ಬ್ಯಾಂಕಿಂಗ್... ಹೀಗೆ ಬೇರೆಬೇರೆ ಸೆಕ್ಷನ್‌ಗಳಿರುತಿದ್ದವು. ಗ್ರಾಹಕರು ಸೀದಾ ಬಂದವರೇ ತಮಗೆ ಹೊಂದುವ ಆಕಾರ, ಗಾತ್ರ, ಬಣ್ಣ, ಅನುಭವವಿರುವ ಕೈಗಳನ್ನು ಆರಿಸಿ ಬಾಡಿಗೆಗೆ ತೆಗೆದುಕೊಳ್ಳಬಹುದಿತ್ತು. ನೆಟ್‌ನಲ್ಲೂ ಇವುಗಳ ವಿವರ ಲಭ್ಯವಿದ್ದು ಆನ್‌ಲೈನ್ ಬುಕಿಂಗ್ ಕೂಡ ಮಾಡಬಹುದಾಗಿತ್ತು. ಪ್ಯಾಕೆಟ್‌ಗಳ ಮೇಲೆ ತಯಾರಿಕೆಯ ದಿನಾಂಕ ಬರೆದಂತೆ ಇಲ್ಲಿ ಅನುಭವದ ವಿವರ ದೊರಕುತ್ತಿತ್ತು. "ನಾಳೆ ಚಿತ್ರಕಲಾ ಸ್ಪರ್ಧೆ ಇದೆ. ಕಾಂಪಿಟೇಟಿವ್ ಹ್ಯಾಂಡ್ಸ್ ಬೇಕಿತ್ತು" ಎಂದು ಗ್ರಾಹಕರು ಬರುತ್ತಿದ್ದರು. ಇದರಂತೆ ಕಸೂತಿ, ರಂಗೋಲಿ, ಟೆನಿಸ್, ಬ್ಯಾಡ್ಮಿಂಟನ್... ಹೀಗೆ ಎಲ್ಲದರಲ್ಲಿಯೂ ನುರಿತ ಕೈಗಳು ದೊರಕುತ್ತಿದ್ದವೇನೋ. ಸೌಂದರ್ಯ ತಜ್ಞ ಕೈಗಳಂತೂ ದುರ್ಲಭವಾಗುತ್ತಿದ್ದವು. ಬ್ಯೂಟಿ ಪಾರ್ಲರ್‌ಗಳಿಗಿಂತ ಜನ ಎಕ್ಸ್‌ಪರ್ಟ್ ಹ್ಯಾಂಡ್ಸ್‌ಗಳನ್ನೇ ಉಪಯೋಗಿಸುತ್ತಿದ್ದರು. ಕೋಚಿಂಗ್ ಕ್ಲಾಸ್‌ನವರು ಕೋಚಿಂಗ್ ಕೊಟ್ಟು ಮುಗಿಸಿ ಕೊನೆಗೆ ಕಷ್ಟವೆನ್ನುವ ವಿದ್ಯಾರ್ಥಿಗಳಿಗೆ ಅದಕ್ಕೆ ತಕ್ಕನಾದ ಕೈಗಳನ್ನು ಅವಶ್ಯಕತೆಯಿದ್ದಲ್ಲಿ ಕೊಡಬಹುದಿತ್ತು. ಬರೀ ನಗರ ಮಾತ್ರವಲ್ಲ, ಹಳ್ಳಿಗಳಲ್ಲೂ, "ನಾಳೆ ಹೊಲಾನಾ ನಾಟಿ ಮಾಡ್ಬೇಕು. ನಾಲ್ಕು ಕೈ ನೋಡಿಟ್ಕೋಬೇಕು" ಎಂಬ ಮಾತು ಕೇಳಿಬರುತ್ತಿತ್ತು. ಅತ್ಯುತ್ತಮ ಕ್ರೀಡಾಪಟು, ಕಲಾವಿದ, ಕೆಲಸಗಾರರಿಗೆ, "ಒಮ್ಮೆಯೂ ಬಾಡಿಗೆ ಕೈ, ಅಥವಾ ರಿಪ್ಲೇಸ್ಮೆಂಟ್‌ಗಳ ಸಹಾಯ ತೆಗೆದುಕೊಳ್ಳದವರು" ಎನ್ನುವ ಅಭಿದಾನ ಪ್ರಾಪ್ತವಾಗುತ್ತಿತ್ತು. "ಒಂದು ಮನೇಲಿ ಹಾಲು